# ಬ್ರಾವೊ ಜತೆ ಶ್ರೀಯಾ ಊಟದ ಹೊತ್ತು!



ವೆಸ್ಟ್ ಇಂಡೀಸ್ ಕ್ರಿಕೆಟಿಗ ಡ್ವೇಯ್ನ್ ಬ್ರಾವೊ ಗಾಯಕನಾಗಿಯೂ ಜನಪ್ರಿಯ. ಭಾರತದಲ್ಲಿಯೂ ಆತನ ಹಾಡುಗಳು ಮೋಡಿ ಮಾಡುತ್ತಿವೆ. ಇತ್ತೀಚೆಗೆ 'ತುಮ್ ಬಿನ್2' ವಿಡಿಯೊ ಆಲ್ಬಂನ ಚಿತ್ರೀಕರಣಕ್ಕಾಗಿ ಬ್ರಾವೊ ಮುಂಬೈಗೆ ಬಂದಿದ್ದ. ಚಿತ್ರೀಕರಣದ ಅವಧಿಯ ನಡುವೆಯೇ ನಡು ಮಧ್ಯಾಹ್ನ ಬ್ರಾವೊ ಕಾಣಿಸಿಕೊಂಡಿದ್ದು ಎಲ್ಲರ ಗಮನ ಸೆಳೆದಿದೆ. ಏಕೆಂದರೆ ಊಟದ ಹೊತ್ತಲ್ಲಿ ಆತ ಏಕಾಂಗಿಯಾಗಿರಲಿಲ್ಲ. ಆತನೊಂದಿಗೆ ದಕ್ಷಿಣದ ಬೆಡಗಿ ಶ್ರೀಯಾ ಶರಣ್ ಕೂಡ ಇದ್ದಳು. ಗುಟ್ಟಾಗಿ ಊಟಕ್ಕೆಂದು ಹೋಗಿದ್ದರಾದರೂ ಬ್ರಾವೊ ಮತ್ತು ಶ್ರೀಯಾ ಕ್ಯಾಮೆರಾಗಳ ಕಣ್ಣಲ್ಲಿ ಸೆರೆಯಾಗಿದ್ದಾರೆ. ಅದರ ಕುರಿತು ಪ್ರಶ್ನೆಗಳನ್ನೆದುರಿಸಲು ಇಬ್ಬರೂ ಮಾಧ್ಯಮಗಳ ಎದುರು ಬಂದಿಲ್ಲ. ಹೀಗಾಗಿ ಅವರ ನಡುವೆ ಊಹಾಪೋಹಗಳು, ಲೆಕ್ಕಾಚಾರಗಳು ಶುರುವಾಗಿವೆ.

ಇಬ್ಬರ ನಡುವೆ ಏನಾದರೂ ಪ್ರೇಮಸಲ್ಲಾಪವಿದೆಯೇ ಎಂಬ ಪ್ರಶ್ನೆ ಹುಟ್ಟುಕೊಂಡಿದೆ. ಕೆಲವು ಮೂಲಗಳ ಪ್ರಕಾರ, ಬ್ರಾವೊ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರವಾಗಿ ಆಡುತ್ತಿದ್ದಾಗ ಐಪಿಎಲ್ ನಾಲ್ಕನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀಯಾ, ಶಾರುಖ್ ಖಾನ್ ಜತೆ ಹೆಜ್ಜೆ ಹಾಕಿದ್ದಳು. ಆಗಲೇ ಆಕೆ ಮತ್ತು ಬ್ರಾವೊ ಗೆಳೆತನ ಶುರುವಾಗಿರಬೇಕು. ಹೀಗೆ ಕದ್ದುಮುಚ್ಚಿ ಇಬ್ಬರೂ ಸೇರಿರುವುದು ಅನುಮಾನಗಳು ದಟ್ಟವಾಗಲು ಕಾರಣವಾಗಿದೆ. ಕ್ಯಾಮೆರಾಗಳಿಗೆ ಸಿಕ್ಕಿಬೀಳುತ್ತೇನೆ ಎಂಬುದರ ಬಗ್ಗೆ ಬ್ರಾವೊಗೆ ಯಾವುದೇ ಚಿಂತೆ ಇದ್ದಂತೆ ಇರಲಿಲ್ಲ. ಆದರೆ ಶ್ರೀಯಾ ಮಾತ್ರ ಒಟ್ಟಿಗೆ ಇಬ್ಬರೂ ಫೋಟೊಗೆ ಸೆರೆ ಸಿಕ್ಕಬಾರದು ಎಂಬ ಎಚ್ಚರಿಕೆಯಿಂದ ಆತನಿಂದ ಅಂತರ ಕಾಯ್ದುಕೊಂಡಿದ್ದಂತೂ ಸ್ಪಷ್ಟ.



# ಮತ್ತೆ ಒಂದಾಗದ ಜೋಡಿ

'ಹಮ್ ದಿಲ್ ದೆ ಚುಕೆ ಸನಮ್' ಚಿತ್ರದಲ್ಲಿ ಸಲ್ಮಾನ್ ಖಾನ್, ಅಜಯ್ ದೇವಗನ್ ಮತ್ತು ಐಶ್ವರ್ಯಾ ರೈ ಒಟ್ಟಿಗೆ ನಟಿಸಿದ್ದರು. ಇದಾದ ಬಳಿಕ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ, ಸಲ್ಲು ಮತ್ತು ಐಶ್ವರ್ಯಾ ಜತೆ ಸಿನಿಮಾಗಳನ್ನು ಮಾಡಿದ್ದರೂ ದೇವಗನ್‌ಗೆ ಮತ್ತೆ ಆ್ಯಕ್ಷನ್ ಕಟ್ ಹೇಳಿರಲಿಲ್ಲ. 17 ವರ್ಷದ ಬಳಿಕ ಈ ಜೋಡಿ ಮತ್ತೆ ಒಂದಾಗುತ್ತದೆ ಎಂಬ ಸುದ್ದಿ ಹರಡಿತ್ತು. ಇದರ ಕುರಿತು ಬಾಲಿವುಡ್ ಸಹ ಕಾತರ ವ್ಯಕ್ತಪಡಿಸಿತ್ತು. ಆದರೆ ಈ ಸುದ್ದಿ ಸುಳ್ಳು ಎಂಬುದು ಖಚಿತವಾಗಿದೆ. ಇಬ್ಬರೂ ಕೂಡಿ ಸಿನಿಮಾ ಮಾಡುವುದು ಸದ್ಯಕ್ಕಂತೂ ಇಲ್ಲ ಎಂಬ ಮಾತು ಬನ್ಸಾಲಿ ಬಳಗದಿಂದ ಹೊರಬಂದಿದೆ. ಅಂದುಕೊಂಡಂತೆ ಆಗಿದ್ದರೆ 'ಬಾಜಿರಾವ್ ಮಸ್ತಾನಿ' ಚಿತ್ರದಲ್ಲಿಯೇ ಬನ್ಸಾಲಿ ಮತ್ತು ಅಜಯ್ ಒಟ್ಟಿಗೆ ಕೆಲಸ ಮಾಡಬೇಕಿತ್ತು. ಆದರೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದರಿಂದ ಆತ ಅದರಿಂದ ಹೊರನಡೆದಿದ್ದ. ಬಳಿಕ ಆ ಪಾತ್ರ ರಣವೀರ್ ಸಿಂಗ್ ಪಾಲಾಯಿತು.

ಇಬ್ಬರೂ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತಿದ್ದಾರೆ. 17 ವರ್ಷದ ಬಳಿಕ ಒಂದಾಗಿ ದಕ್ಷಿಣದ ಸಿನಿಮಾವೊಂದನ್ನು ಹಿಂದಿಗೆ ರಿಮೇಕ್ ಮಾಡಲಿದ್ದಾರೆ ಎನ್ನಲಾಗಿತ್ತು. ಆದರೆ ಅಜಯ್ ಮತ್ತು ಬನ್ಸಾಲಿ ನಡುವಣ ಮನಸ್ತಾಪ ಸದ್ಯಕ್ಕೆ ಬಗೆಹರಿಯುವಂತೆ ಕಾಣಿಸುತ್ತಿಲ್ಲ. ಹೀಗಾಗಿ ಅವರು ಒಟ್ಟಿಗೆ ಸೇರಿ ಕೆಲಸ ಮಾಡುವುದು ಕಪೋಲಕಲ್ಪಿತ ವರದಿಗಳಷ್ಟೇ ಎಂದು ಮೂಲವೊಂದು ತಿಳಿಸಿದೆ.

ಪ್ರಸ್ತುತ ಅಜಯ್ ತನ್ನ ಮಹತ್ವಾಕಾಂಕ್ಷೆಯ 'ಶಿವಾಯ್' ಚಿತ್ರದ ಪ್ರಚಾರದಲ್ಲಿ ಬಿಜಿಯಾಗಿದ್ದಾನೆ. ದೀಪಾವಳಿಗೆ ಚಿತ್ರ ಬಿಡುಗಡೆಯಾಗಲಿದೆ. ಇದೇ ವೇಳೆ ಕರಣ್ ಜೋಹರ್‌ನ 'ಏ ದಿಲ್ ಹೈ ಮುಷ್ಕಿಲ್' ಕೂಡ ತೆರೆ ಕಾಣುತ್ತಿದೆ. 'ಶಿವಾಯ್' ಅಜಯ್‌ನ ವೃತ್ತಿ ಜೀವನದ ಅತಿ ದೊಡ್ಡ ಸಿನಿಮಾ. ಹೀಗಾಗಿ ಆತ ತುಸು ಹೆಚ್ಚೇ ಮುತುವರ್ಜಿ ವಹಿಸಿ ಅದರ ಕೆಲಸಗಳಲ್ಲಿ ತೊಡಗಿದ್ದಾನೆ. ಚಿತ್ರದ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಉಂಟಾಗಿದ್ದ ಗೊಂದಲಗಳು ನಿವಾರಣೆಯಾಗಿರುವುದು ತುಸು ನಿರಾಳತೆ ಮೂಡಿಸಿದೆ.

